

ರಾಣಿ ರೂಪಮತಿಯ ಅರಮನೆ ಹಿನ್ನೆಲೆಯಲ್ಲಿ ಬಾವೋಬಾಬ್ ಮರ

ಕರೆಯುತ್ತಿದ್ದರು. ಮಸಾಲೆ ಪದಾರ್ಥಗಳನ್ನು ಸಾಗಿಸುವ ಮಾರ್ಗದಲ್ಲಿದ್ದ ಖೊರಾಸಾನ್ ಮೂಲಕ ಹೋಗುವ ವ್ಯಾಪಾರಿಗಳ ಮೂಲಕ ಮಾಂಡುವಿಗೆ ಬಾವೋಬಾಬ್ ಬೀಜಗಳು ಬಂದವು' ಎಂದು ಹೇಳಿದ.

ಎರಡು ಕೆರೆಗಳ ನಡುವೆ ಹಡಗಿನ ಮಾದರಿಯಲ್ಲಿ ರಚನೆಯಾದ ಜಹಾಜ್ ಮಹಲ್, ಕೆರೆಗಳಲ್ಲಿ ನೀರು ತುಂಬಿದಾಗ ಲಂಗರು ಹಾಕಿ ನಿಂತ ಹಡಗಿನಂತೆ ಗೋಚರಿಸುತ್ತದೆ. ಸುಲ್ತಾನ್ ಘೀಯಾಸುದ್ದೀನ್ ಖಿಲ್ಜಿ ನಿರ್ಮಾಣದ ಈ ಸುಂದರ ಅರಮನೆ ನೋಡುವಾಗ ಪೂರ್ವ ದಿಕ್ಕಿನಲ್ಲಿ ಹೆಡೆ ಬಿಚ್ಚಿದ ಹಾವುಗಳು ನಿಂತಂತೆ ಬಾವೋಬಾಬ್ ಮರಗಳು ಕಂಡವು. ಅಲ್ಲೇ ಇದ್ದ ಸ್ಥಳೀಯರೊಬ್ಬರು, ನನ್ನ ಮನಸ್ಸನ್ನು ಅರಿತವರಂತೆ, 'ಸುಲ್ತಾನ್ ಘೀಯಾಸುದ್ದೀನ್ ಖಿಲ್ಜಿಯನ್ನು ಭೇಟಿ ಮಾಡಲು ಅನೇಕ ಮಂದಿ ವಿದೇಶೀಯರು ಬರುತ್ತಿದ್ದರು. ಹಾಗೆ ಮಡಗಾಸ್ಕರ್‌ನಿಂದ ಬಂದ ವ್ಯಾಪಾರಿಯೊಬ್ಬರು ನೀಡಿದ ಉಡುಗೊರೆಯೇ ಬಾವೋಬಾಬ್ ಬೀಜಗಳು. ಆ ಬೀಜಗಳನ್ನು ಮೊದಲು ಇಲ್ಲಿ ನೆಡಲಾಯಿತು. ನಂತರ ಮಾಂಡುವಿನ ಇತರ ಕಡೆ ನೆಡಲಾಯಿತು' ಎಂದರು.

ಮೂರನೆಯ ಕಾರಣ, ಸುಮಾರು 100 ಮಿಲಿಯನ್ ವರ್ಷಗಳ ಹಿಂದೆ ಭಾರತ, ಮಡಗಾಸ್ಕರ್ ಮತ್ತು ಆಸ್ಟ್ರೇಲಿಯಾ ಮೂರೂ ಸೇರಿಕೊಂಡಿದ್ದು, ಗೊಂಡ್ವಾನಾ ಭೂಮಿ ಎನ್ನಲಾಗುತ್ತಿತ್ತು. ಭೂಖಂಡದ ವಿಭಜನೆಯಿಂದ ಬಾವೋಬಾಬ್ ಮೂರೂ ದಿಕ್ಕಿಗೆ ಹರಡಿತು ಎನ್ನುವರು.

ಇನ್ನು ಕೆಲ ಇತಿಹಾಸಜ್ಞರು ಪೋರ್ಚುಗೀಸರು ಭಾರತಕ್ಕೆ ತಂದ ಆಫ್ರಿಕನ್ ಜೀತದಾಳುಗಳ ಜೊತೆ ಈ ಮರದ ಬೀಜಗಳೂ ಬಂದಿರಬಹುದು ಎಂದು ಹೇಳುವರು.

ಆದರೂ, ಭಾರತದಲ್ಲಿ ಮಾಂಡುವಿನಲ್ಲಿಯೇ ಏಕೆ ಈ ಬಾವೋಬಾಬ್ ಮರಗಳು ಹೇರಳವಾಗಿ ಕಂಡುಬರುತ್ತವೆ ಎಂಬ ಪ್ರಶ್ನೆ ಮಾತ್ರ ಪ್ರಶ್ನೆಯಾಗಿಯೇ ಉಳಿಯುತ್ತದೆ.

ಆಟೊ ಹತ್ತುವ ಮುನ್ನ, ಮೂಲೆಯಲ್ಲಿದ್ದ ಅಂಗಡಿಯಾತ ಬಾವೋಬಾಬ್ ಕಾಯಿಯ ಒಣಗಿಸಿರುವ ತಿರುಳನ್ನು ಪುಡಿ ಮಾಡಿ, ತಣ್ಣನೆಯ ನೀರಿನೊಂದಿಗೆ ಬೆರೆಸಿ ಶರಬತ್ ಮಾಡಿ ಕೊಟ್ಟಾಗ, ಬಾಜ್ ಬಹದ್ದೂರನ ಅರಮನೆಯನ್ನೆಲ್ಲಾ ಸುತ್ತಾಡಿ, ಸುಸ್ತಾಗಿ ಬಂದ ನನಗೆ, 'ವಿಟಮಿನ್ ಸಿ' ಅಂಶವಿರುವ ಈ ಬಾವೋಬಾಬ್ ಶರಬತ್ ಸವಿಯುತ್ತಾ ನವಚೈತನ್ಯ ಬಂದಂತಾಯಿತು.

## ಭೌಗೋಳಿಕ ಸೂಚ್ಯಂಕ ಟ್ಯಾಗ್

ಧಾರ್ ಜಿಲ್ಲೆಯ ತೋಟಗಾರಿಕಾ ಇಲಾಖೆ ಬಾವೋಬಾಬ್ ಮರದ ಹಣ್ಣುಗಳಿಗೆ ಭೌಗೋಳಿಕ ಸೂಚ್ಯಂಕ (GI) ಟ್ಯಾಗ್‌ಗೆ ಅರ್ಜಿ ಸಲ್ಲಿಸಿದೆ. ಈ ಮೂಲಕ ಈ ಮರಗಳ ಸಂರಕ್ಷಣೆ ಮತ್ತು ಮಾನ್ಯತೆ ಪಡೆಯಲು ಪ್ರಯತ್ನಿಸುತ್ತಿದೆ. ಮಾಂಡು ಪಟ್ಟಣದಲ್ಲಿ ಸಾವಿರಕ್ಕೂ ಅಧಿಕ ಬಾವೋಬಾಬ್ ಮರಗಳಿದ್ದು, ಹೆಚ್ಚಿನ ಮಾನ್ಯತೆ, ಸ್ಥಳೀಯ ರೈತರಿಗೆ ಮತ್ತು ಬಡಕಟ್ಟು ಜನರಿಗೆ ಆರ್ಥಿಕ ಲಾಭ ಹಾಗೂ ಅಪರೂಪದ ಮರಗಳನ್ನು ರಕ್ಷಿಸುವ ಉದ್ದೇಶದಿಂದ ಸರ್ಕಾರವೂ ಈ ಬಗ್ಗೆ ಆಸಕ್ತಿ ವಹಿಸಿದೆ.

ಪ್ರತಿಕ್ರಿಯಿಸಿ: feedback@sudha.co.in

## ಸವಣೂರಿನ ಆಫ್ರಿಕನ್ ಮರಗಳು

ನಮ್ಮ ರಾಜ್ಯದ ಹಾವೇರಿಯ ಸವಣೂರಿನಲ್ಲೂ ಮೂರು ಬಾವೋಬಾಬ್ ಮರಗಳಿವೆ. ಅದರ ಕಾಯಿಗಳು ಹುಣಸೆಯಂತೆ ಹುಳಿ ರುಚಿಯಿರುವುದರಿಂದ ಸ್ಥಳೀಯರು ಆ ಮರಗಳನ್ನು ಹುಣಸೆಮರಗಳೆಂದೇ ಕರೆಯುತ್ತಾರೆ. ಹುಣಸೆಯಲ್ಲಿದ್ದಂತೆ ಇದರಲ್ಲೂ ಟಾರ್ಟಾರಿಕ್ ಆಮ್ಲ ಇದೆ. ಸಾಕಷ್ಟು 'ವಿಟಮಿನ್ ಸಿ'ಯನ್ನೂ ಹೊಂದಿದೆ.

ಈ ಮರಗಳು ತಲೆ ಕೆಳಗಾಗಿ ನಿಂತಂತೆ ಕಾಣುವುದರಿಂದ ಮೂಲ ತವರಿನಲ್ಲಿ ಇವನ್ನು 'ತಲೆ ಕೆಳಗಾಗಿಸಿಕೊಂಡ ಮರ' ಎಂದೇ ಕರೆಯುತ್ತಾರೆ. ಸವಣೂರಿನಲ್ಲಿ ಸಾವಿರಾರು ವರ್ಷಗಳಿಂದಲೂ ಇರುವ ಕಾರಣಕ್ಕೆ, ಅಲ್ಲಿನ ಜನ ಶ್ರೀಕೃಷ್ಣ ತಂದು ನೆಟ್ಟ ಎನ್ನುತ್ತಾರೆ. ಇತರ ಮರಗಳಂತೆ ಮೂಲ ಕಾಂಡದಲ್ಲಿ ಬಳೆಗಳನ್ನು ಹೊಂದಿರದೆ ತನ್ನ ವಯಸ್ಸಿನ ಗುಟ್ಟನ್ನು ಬಿಟ್ಟುಕೊಡದ ಮರಗಳಿವು.

## ಪ್ರಧಾನಿ ನೆಟ್ಟ ಬಾವೋಬಾಬ್ ಸಸಿ

ಪ್ರಧಾನಿ ನರೇಂದ್ರ ಮೋದಿ ಅವರು ಅಯೋಧ್ಯೆಯ ನವಮಂದಿರ ನಿರ್ಮಾಣಕ್ಕೆ ಅಡಿಗಲ್ಲು ಹಾಕಿ, ಗುದ್ದಲಿ ಪೂಜೆ ಮಾಡಿದ ಸಂದರ್ಭದಲ್ಲಿ ಮಂದಿರದ ಆವರಣದಲ್ಲಿ ಪಾರಿಜಾತ ಗಿಡ ನೆಡಬೇಕಿತ್ತು. ಪಾರಿಜಾತವೆಂದರೆ 'ಓಲಿಯೇಸಿಯೇ' ಕುಟುಂಬಕ್ಕೆ ಸೇರಿದ, Nyctanthes arbor–tristis ಎಂಬ ವೈಜ್ಞಾನಿಕ ಹೆಸರುಳ್ಳ ಗಿಡ. ಉತ್ತರ ಪ್ರದೇಶದ ಅರಣ್ಯ ಇಲಾಖೆ ಪಾರಿಜಾತವೆಂದರೆ 'ಮಾಲ್ವೇಸಿಯೇ' ಕುಟುಂಬಕ್ಕೆ ಸೇರಿದ ಆಫ್ರಿಕನ್ ಬಾವೋಬಾಬ್ (Adansonia digitata) ಎಂಬ ಮರವೆಂದು ತಪ್ಪಾಗಿ ಅರ್ಥೈಸಿಕೊಂಡು ಪ್ರಧಾನಿ ಅವರು ನೆಡಲು ಅದರ ಸಸಿಯನ್ನೇ ಕಳುಹಿಸಿತ್ತು. ಹಾಗಾಗಿ ಬಾವೋಬಾಬ್ ಸಸಿಯನ್ನು ಪ್ರಧಾನಿ ಅಯೋಧ್ಯೆಯ ಮಂದಿರದ ಮುಂದೆ ನೆಟ್ಟಿರುವರು!